ಸಾಕ್ಷಿಯನ್ನು ದಿಃ**25.09.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಟಿ.ಎಂ.ಎಸ್. ವಕೀಲರಿಂದ:

ಪ್ರತಿವಾದ ಪತ್ರದ ಆಸ್ತಿಯನ್ನು ನಾನು ನೋಡಿರುತ್ತೇನೆ . ಸದರಿ ಆಸ್ತಿ ವಾದಿಗೆ ಸೇರಿರುತ್ತದೆ. ಸದರಿ ಆಸ್ತಿ ಖಾಲಿ ಜಾಗ ಇರುತ್ತದೆ. ಸದರಿ ಆಸ್ತಿ ಪೂರ್ವ- ಪಶ್ಚಿಮ 36 ಅಡಿ, ಉತ್ತರ-ದಕ್ಷಿಣಃ 46 ಅಡಿ ಇರುತ್ತದೆ. ಸದರಿ ಆಸ್ತಿಗೆ ಪಂಚಾಯಿತಿಯವರು ಮನೆ ಕಟ್ಟಲು ಪರವಾನಗಿ ನೀಡಿರುತ್ತಾರೆ. ಸದರಿ ಪರವಾನಗಿಯನ್ನು ನಾನು ನೋಡಿರುತ್ತೇನೆ. ನಾನು ಕಟ್ಟಡದ ನಕ್ಷೆಯನ್ನು ನೋಡಿರುವುದಿಲ್ಲ. ಯಾವುದೇ ಮನೆಯನ್ನು ಕಟ್ಟಲು 3 ಅಡಿ ಜಾಗ ಬಿಟ್ಟು ಕಟ್ಟಬೇಕು ಎಂದರೆ ಸಾಕ್ಷಿಯು ಕಬೂಲು ಇದ್ದರೆ ಎಂದು ನುಡಿಯುತ್ತಾರೆ. ಪೂರ್ವಕ್ಕೆಃಮಧು ಕುಮಾರ್ ರವರ ಮನೆ , ಪಶ್ಚಿಮಕ್ಕೆಃ ರಸ್ತೆ, ಉತ್ತರಕ್ಕೆಃ ಪ್ರತಿವಾದಿಯ ಆಸ್ತಿ ಮತ್ತು ದಕ್ಷಿಣಕ್ಕೆಃರಸ್ತೆಯಿರುವ ಆಸ್ತಿಯನ್ನು ನಾನು ನೋಡಿರುತ್ತೇನೆ. ಸದರಿ ಚೆಕ್ಕು ಬಂದಿಯ ಆಸ್ತಿ ವಾದಿಯ ಆಸ್ತಿಯಾಗಿರುತ್ತದೆ.

ನಾನು ಹೇಳುವಂತೆ ಕಲ್ಲು ಚಪ್ಪಡಿಗಳನ್ನು ಮಳೆ ನೀರಿನಿಂದ ಗೋಡೆ ಹಾಳಾಗಬಾರದು ಎಂದು ಹಾಕಲಾಗಿತ್ತು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ವಾದಿಯ ಮನೆ ಹಾಗೂ ಪ್ರತಿವಾದಿಯ ಆಸ್ತಿಯ ನಡುವೆ ನಾನು ಹೇಳುವಂತೆ 1½ ಅಡಿ ಗಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಗಲ್ಲಿ ಇದ್ದ ಕುರಿತು ವಾದಿಯ ಕ್ರಯ ಪತ್ರವನ್ನು ನೋಡಿರುತ್ತೇನೆ ಸದರಿ ಕ್ರಯ ಪತ್ರದ ವೇಳೆಯಲ್ಲಿ ನಾನು

ಭಾಗಿದಾರನಾಗಿರಲಿಲ್ಲ. ವಾದಿಗೆ ಕ್ರಯ ಆಗುವ ವೇಳೆಗೆ ದಾವಾ ಆಸ್ತಿಯಲ್ಲಿ ಮನೆ ಇತ್ತು. ನಿಪಿ.11 ರಲ್ಲಿ ಉತ್ತರಕ್ಕೆ ಜಯಮ್ಮನವರ ಮನೆ ಎಂದು ತೋರಿಸಿದ್ದು, ನಾನು ಹೇಳುವಂತೆ 1 ½ ಅಡಿ ಗಲ್ಲಿ ಎಂದು ತೋರಿಸಿಲ್ಲ ಎನ್ನುವ ವಿಚಾರ ತಿಳಿದಿದ್ದರೂ ಇಲ್ಲ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ತಮ್ಮಯ್ಯ ಹಾಗೂ ಲಿಂಗಯ್ಯರವರ ಮನೆಯ ಮಧ್ಯೆ ಇದ್ದ ಜಂಟಿ ಗೋಡೆಯ ಒತ್ತು ಕಲ್ಲನ್ನು ಪ್ರಯತ್ನ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಂಟಿ ಗೋಡೆ ಹಾಗೂ ಒತ್ತು ಕಲ್ಲು ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಒತ್ತು ಕಲ್ಲನ್ನು ವಾದಿ ಕಿತ್ತು ಹಾಕಬಾರದು ಎಂದು ಪ್ರತಿವಾದಿ ದಾವೆ ಹೂಡಿದ್ದರು ಎಂದರೆ ಸರಿ. ವಾದಿ ನಮ್ಮ ಊರಿನವರಾಗಿರುತ್ತಾರೆ. ತಮ್ಮಯ್ಯ ಹಾಗೂ ಲಿಂಗಯ್ಯರವರ ಮನೆಯ ಮಧ್ಯದ ಜಂಟಿ ಗೋಡೆಗೆ ಒತ್ತು ಕಲ್ಲು ಇದ್ದುದರಿಂದ ಅಲ್ಲಿ ಯಾವುದೇ 1 ½ ಅಡಿ ಗಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ವಾದಿ ಲಿಂಗಯ್ಯರವರ ಗೋಡೆಯನ್ನು ಕಿತ್ತು ಹಾಕಿ ಲಿಂಗಯ್ಯನವರ ಆಸ್ತಿಯನ್ನು ಕಬಳಿಸುವ ದುರುದ್ದೇಶದಿಂದ ನನ್ನಿಂದ ಸುಳ್ಳು ಸಾಕ್ಷ್ಯವನ್ನು ನುಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿ ಯಾವುದೇ ಕಟ್ಟಡ ಪರವಾನಗಿ ಪಡೆದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 1 ½ ಅಡಿ ಗಲ್ಲಿ ಸಮೇತ ವಾದಿ ಹಾಗೂ ಅವರ ಪೂರ್ವ ಮಾಲೀಕರು ಅನುಭೋಗ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷ್ಯವನ್ನು

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ 20 X 13 ಚ.ಮೀ. ಇದ್ದು ಉಳಿದ ಜಾಗ ಖಾಲಿ ಇರುತ್ತದೆ ಎನ್ನುವ ವಿಚಾರ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ನಾನು ಹೇಳುವಂತೆ ರಾತ್ರೋ ರಾತ್ರಿ ಯಾವುದೇ ಕಟ್ಟಡ ಕಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯಿಂದ ಆರ್ಥಿಕ ಸಹಾಯ ಪಡೆದಿರುವ ಕಾರಣ ವಾದಿಗೆ ಅನೂಕೂಲವಾಗಲೆಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.